**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿಯವರ ನ್ಯಾಯಾಲಯ, ಪೊನ್ನಂಪೇಟೆ.**

**ಕ್ರಿ.ಮೊ.ಸಂಖ್ಯೆ:729/2024**

**ಪಿರ್ಯಾದುದಾರರು:** : ರಾಜ್ಯ ಸರ್ಕಾರ,
ಪೊನ್ನಂಪೇಟೆ ಪೋಲೀಸ್ ಠಾಣೆ,

**ವಿರುದ್ಧ**

**ಆರೋಪಿಗಳು:** ಶ್ರೀ ನೌಶದ್ ಪಿ.ಎ,
ತಂದೆಃ ಅಬ್ದುಲ್ ಅಜೀಜ್‌ಪಿ.ಎಮ್,
ಪ್ರಾಯಃ 33 ವರ್ಷ,
ವಾಸಃ ಬೇತು ರೋಡ್, ಇಂಡಿದಿರಾ ನಗರ,
ನಾಪೊಕ್ಲು, ಮಡಿಕೇರಿ ತಾಲ್ಲೂಕು,
ಕೊಡಗು.

**ದಂಡ ಪ್ರಕ್ರಿಯೆ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿಗಳ ಹೇಳಿಕೆ**

**ಪ್ರಶ್ನೆ ಸಂಖ್ಯೆ - 1** : ಇದುವರೆವಿಗೂ ಅಭಿಯೋಜನೆ ಪರ ಸಾಕ್ಷ್ಯ ನುಡಿದ ಸಾಕ್ಷಿಗಳ ಸಾಕ್ಷ್ಯವನ್ನು ಆಲಿಸಿದ್ದೀರಾ?

**ಉಃ ಕೇಳಿದ್ದೇನೆ.**

**ಪ್ರಶ್ನೆ ಸಂಖ್ಯೆ - 2.** ಪ್ರಾ.ಸಾ.1/ಚಾ.ಸಾ.1 ಶ್ರೀಮತಿ ಡೇಚಮ್ಮ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿ 07.05.2023 ರಂದು ಚಾ.ಸಾ.1 ಮತ್ತು ಅವರ ಗಂಡನಿಗೆ ಆರೋಪಿಯಾದ ನೀವು Whats app ಗೆ ನಿಮ್ಮ ಬಳಿ ಚಾ.ಸಾ.1 ರವರ ಸೆಕ್ಸ್ ವಿಡಿಯೋ ಇದೆ ಎಂದು ಮೇಸೇಜ್ ಮಾಡಿ ಬೇದರಿಕೆ ಹಾಕಿರುತ್ತೀರಿ. ಅದನ್ನು ಸೋಶೀಯಲ್ ಮೀಡಿಯಾದಲ್ಲಿ ಹಾಕಿ ವೈರಲ್ ಮಾಡುವುದಾಗಿ ಮೇಸೇಜ್ ನಲ್ಲಿ ಹೇಳಿರುತ್ತೀರಿ ಮತ್ತು ಇದನ್ನು ನಿಲ್ಲಿಸಬೇಕು ಎಂದರೆ ಹಣ ಕೊಡಬೇಕೆಂದು ಮೇಸೇಜ್ ಹಾಕಿರುತ್ತೀರಿ. ಚಾ.ಸಾ.1 ಮತ್ತು ಅವರ ಗಂಡ ಇಂತಹ ಮೇಸೇಜ್ ಗಳನ್ನು ಕಳುಹಿಸಬೇಡ ಎಂದು ರಿಪ್ಲೈ ಮಾಡಿರುತ್ತಾರೆ. ಆರೋಪಿಯಾದ ನೀವು ಚಾ.ಸಾ.1 ರವರ ಹೆಸರಿನಲ್ಲಿ Sheelu Dechamma ಎಂಬ ಪೇಸ್‌ಬುಕ್ ಅಕೌಂಟ್ ತೆರೆದಿದ್ದು, ಅದರಲ್ಲಿ ಸೆಕ್ಸ್ ವಿಡಿಯೋ ಹಾಕುತ್ತೇನೆ ಎಂದು ಪೋಸ್ಟ್ ಮಾಡಿರುತ್ತೀರಿ. ಸದರಿ ಅಕೌಂಟ್ ನಲ್ಲಿ ನಿಮ್ಮ ತುಂಬಾ ಸ್ನೇಹಿತರನ್ನು Add ಮಾಡಿರುತ್ತೀರಿ. ನಂತರ ಆರೋಪಿಯಾದ ನೀವು ಇನ್ನೊಂದು ಹೆಸರಾದ Sharath Nelmakkada ಎಂಬ ಹೆಸರಿನಲ್ಲಿ ಫೆಸ್ ಬುಕ್ ಖಾತೆ ತೆರೆದು ಆ ಅಕೌಂಟ್ ನಲ್ಲೂ ಚಾ.ಸಾ.1 ರವರ ಬಗ್ಗೆ ಕೆಟ್ಟದಾಗಿ ಪೋಸ್ಟ್ ಮಾಡಿರುತ್ತೀರಿ. ದಿ.21.06.2023 ರವರೆಗೂ ಆರೋಪಿಯಾದ ನೀವು ಇದೇ ರೀತಿ ಚಾ.ಸಾ.1 ರವರಿಗೆ Whats app ನಲ್ಲಿ ಮೇಸೇಜ್ ಮಾಡಿಕೊಂಡು ಅವರನ್ನು ಕೆಟ್ಟದಾಗಿ ಬಿಂಬಿಸಿರುತ್ತೀರಿ ನಂತರ ಚಾ.ಸಾ.1 ರವರು ಮೊದಲಿಗೆ ಮಡಿಕೇರಿಯ CEN ಪೊಲೀಸರಿಗೆ ದೂರು ಕೊಟ್ಟಿರುತ್ತಾರೆ. ಪೋಲೀಸರು ಆರೋಪಿಯಾದ ನಿಮ್ಮ IP Address ನೋಡಿ ನೀವು ದುಬೈ ನಲ್ಲಿರುವುದಾಗಿ ಹೇಳಿ ಕ್ರಮ ಕೈಗೊಳ್ಳಲಾಗುವುದಿಲ್ಲ ಎಂದು ಹೇಳಿರುತ್ತಾರೆ. ನಂತರ ಚಾ.ಸಾ.1 ರವರು ಅದನ್ನು SP ಮಡಿಕೇರಿ ಅವರಿಗೂ ದೂರು ಕೊಟ್ಟಿರುತ್ತಾರೆ. ನಂತರ ಪೋಲೀಸರು ಆರೋಪಿಯಾದ ನಿಮ್ಮ ತಂದೆ ತಾಯಿಯನ್ನು ಕಚೇರಿಗೆ ಕರೆಸಿ ನಿಮಗೆ ಬುದ್ದಿ ವಾದ ಹೇಳಲು ಹೇಳಿರುತ್ತಾರೆ. ಆದರೆ ಆರೋಪಿಯಾದ ನೀವು ನವೆಂಬರ್ 2023 ಮತ್ತು ಮಾರ್ಚ್ 2024 ಪುನಃ ಇದೇ ರೀತಿ ಫೇಕ್ ಅಕೌಂಟ್ ಗಳನ್ನು ಕ್ರಿಯೇಟ್ ಮಾಡಿ ಚಾ.ಸಾ.1 ಮತ್ತು ಅವರ ಕುಟುಂಬದವರಿಗೂ ಮಾನಸಿಕ

ಹಿಂಸೆ ಕೊಟ್ಟಿರುತ್ತೀರಿ. ನಂತರ ದಿ.21.06.2023 ರಂದು ಚಾ.ಸಾ.1 ರವರು ಪೊನ್ನಂಪೇಟೆ ಪೋಲೀಸರಿಗೆ ದೂರು ಕೊಟ್ಟಿರುತ್ತಾರೆ. ಪೋಲೀಸರ 24.06.2023 ರಂದು ಚಾ.ಸಾ.1 ರವರ ಮನೆಗೆ ಹೋಗಿ ಮಹಜರ್ ಮಾಡಿರುತ್ತಾರೆ. ಅದೇ ದಿನ ಚಾ.ಸಾ.1 ರವರು ವಿರಾಜಪೇಟೆ ನ್ಯಾಯಾಲಯಕ್ಕೆ ಹೋಗಿ ಅವರ ಹೇಳಿಕೆ ಕೊಟ್ಟಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು.

<u>**ಪ್ರಶ್ನೆ ಸಂಖ್ಯೆ - 3.**</u> ಪ್ರಾ.ಸಾ.2/ಚಾ.ಸಾ.2 ಶ್ರೀ ಮಿಲನ್ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿಃ04.05.2023 ರಂದು ಚಾ.ಸಾ.1 ರವರನ್ನು ಮದುವೆ ಆಗಿರುವುದಾಗಿ, ಮಮವೆಯಾದ 2 ದಿನಗಳ ನಂತರ ಚಾ.ಸಾ.1 ರವರ ವಾಟ್ಸಪ್ ಅಕೌಂಟ್‌ಗೆ ಇಪ್ಪತ್ತು ಸಾವಿರ ಹಣ ಕೊಡುವಂತೆ, ಕೊಡದಿದರೆ ಚಾ.ಸಾ.1 ರವರ ಬೆತ್ತಲೆಯ ಫೋಟೋಗಳನ್ನು ಹಾಕುವುದಾಗಿ ಮೆಸೇಜ್ ಬಂದಿರುತ್ತದೆ. ಆರೋಪಿಯಾದ ನೀವು ಮೆಕಾನಿಕ್ ಮುಖಾಂತರ ಚಾ.ಸಾ.2 ರವರ ಫೋನ್ ನಂಬರನ್ನು ಪಡೆದುಕೊಂಡಿರುತ್ತೀರಿ. ಆರೋಪಿಯಾದ ನೀವು ಚಾ.ಸಾ.2 ರವರ ವ್ಯಾಟ್ಸಪ್ ನಂಬರಿಗೆ ಚಾ.ಸಾ.1 ರವರ ಬೆತ್ತಲೆ ಫೋಟೋ ಇರುವುದಾಗಿ ತಿಳಿಸಿ ಬೆದರಿಕೆ ಹಾಕಿರುತ್ತೀರಿ ಎಂದು ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು.

<u>**ಪ್ರಶ್ನೆ ಸಂಖ್ಯೆ - 4.**</u> ಪ್ರಾ.ಸಾ.3/ಚಾ.ಸಾ.3 ಶ್ರೀಮತಿ ಲೀಲಾವತಿ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ಆರೋಪಿಯಾದ ನೀವು ಅವರ ತಂಗಿ ಮದುವೆ ಆದ ನಂತರ ಆಕೆಯ ನಗ್ನ ಫೋಟೋಗಳನ್ನು ಹಾಕುವುದಾಗಿ ಮತ್ತು ಅವರ ಕುಟುಂಬದ ಮಾನ ಹೋಗುವ ರೀತಿಯಲ್ಲಿ ಮಾಡುವುದಾಗಿ ಹೇಳಿ ಬೆದರಿಕೆ ಹಾಕಿರುತ್ತೀರಿ ಎಂದು ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು.

<u>**ಪ್ರಶ್ನೆ ಸಂಖ್ಯೆ - 5.**</u> ಪ್ರಾ.ಸಾ.4/ಚಾ.ಸಾ.4 ಶ್ರೀ ಯಶು ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ಆರೋಪಿಯಾದ ನೀವು ಅವರ ಮೊಬೈಲಿಗೆ ಹಣ ಕೊಡುವಂತೆ ಕರೆ ಮಾಡುತ್ತಿದ್ದು, ಸುಮಾರು ಭಾರಿ ಇದೇ ರೀತಿ ಮಾಡಿದ್ದಕ್ಕೆ ಚಾ.ಸಾ.1 ರವರು ಪೋಲೀಸರಿಗೆ ದೂರು ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು.

<u>**ಪ್ರಶ್ನೆ ಸಂಖ್ಯೆ - 6.**</u> ಪ್ರಾ.ಸಾ.5/ಚಾ.ಸಾ.8 ಶಶಿಕುಮಾರ್ ಅವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ನಿ.ಪಿ.30 ಅಮಾನತ್ತು ಮಹಜರ್ ನಲ್ಲಿರುವ ತಮ್ಮ ಸಹಿಯನ್ನು ನಿ.ಪಿ.30(ಎ) ಎಂದು ಗುರ್ತಿಸಿರುತ್ತಾರೆ. ಪೋಲೀಸರು ಆರೋಪಿಯಾದ ನಿಮ್ಮ ಮೊಬೈಲನ್ನು ಅಮಾನತ್ತು ಪಡಿಸಿಕೊಂಡ ಸಮಯದಲ್ಲಿ ಚಾ.ಸಾ.8 ರವರ ಸಹಿಯನ್ನು ಪಡೆದಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು.

**<u>ಪ್ರಶ್ನೆ ಸಂಖ್ಯೆ - 7.</u>** ಪ್ರಾ.ಸಾ.6/ಚಾ.ಸಾ.6 ಚಂದ್ರಶೇಖರ್ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ನಿ.ಪಿ3 ಮತ್ತು ನಿ.ಪಿ.6 ರಲ್ಲಿರುವ ತಮ್ಮ ಸಹಿಯನ್ನು ನಿ.ಪಿ.3(ಬ) ಮತ್ತು 6(ಎ) ಎಂದು ಗುರ್ತಿಸಿರುತ್ತಾರೆ. ಸದರಿ ಸಹಿಯನ್ನು ದಿಃ24.06.2023 ರಂದು ಕಾನೂರು ಜಂಕ್ಷನ್ ನಲ್ಲಿರುವ ಚಾ.ಸಾ.1 ರವರ ಮನೆಯ ಬಳಿ ಮಾಡಿರುತ್ತಾರೆ. ಫೇಸ್ ಬುಕ್, ವ್ಹಾಟ್ಸಪ್ ಗಳಲ್ಲಿ ಮೆಸೇಜ್ ಮಾಡುವ ವಿಚಾರವಾಗಿ ಮಹಜರ್ ಗೆ ಸಹಿ ಮಾಡಿರುತ್ತಾರೆ. ನಂತರ ಅದೇ ದಿನ ಪೋಲೀಸ್ ಠಾಣೆಯಲ್ಲಿ ಫೋನ್ ಮೆಸೇಜ್ ಗಳ ಸ್ಕ್ರೀನ್ ಶಾಟ್‌ಗಳನ್ನು ಪೋಲೀಸರಿಗೆ ಕೊಡುವ ಸಮಯದಲ್ಲಿ ಮಹಜರ್ ಕ್ರಮ ಜರುಗಿಸಿದ್ದು, ಆಗ ಸಹಿ ಮಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೆಳಬಯಸುವಿರಿ?

ಉಃ ಸುಳ್ಳು.

**<u>ಪ್ರಶ್ನೆ ಸಂಖ್ಯೆ - 8.</u>** ಪ್ರಾ.ಸಾ.7/ಚಾ.ಸಾ.11 ರಶ್ಮಿ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿಃ16.01.2024 ರಂದು ಚಾ.ಸಾ.21 ರವರಿಂದ ಪಡೆದ Oppo Mobile phone of Model no CPH 2505 ಅನ್ನು Preliminary examination ಮಾಡಿರುತ್ತಾರೆ. ಮೊಬೈಲ್ ಜೊತೆ Jio Nana Sim card ಇರುತ್ತದೆ. ಮೊಬೈಲ್ ಫೋನಿಗೆ Preliminary Examination ಗೆ D1A, 2 ಸಿಮ್ ಗಳಿಗೆ D1B and D1C ಎಂದು ಗುರುತಿಸಿ ಅದರ ವರ್ಶನ್ ಅನ್ನು ವರದಿಯಲ್ಲಿ ತಿಳಿಸಿರುತ್ತಾರೆ. Analysis ಅನ್ನು Cellebrite UFED physical analyser ನಿಂದ ಮಾಡಿರುತ್ತಾರೆ. ಸದರಿ ಫೋನಿಗೆ ಹಾಕಿದ software ಸಂಪೂರ್ಣವಾಗಿ support ಮಾಡದೇ ಇದ್ದುದರಿಂದ partial data extraction ಆಗಿರುತ್ತದೆ. ವ್ಹಾಟ್ಸಪ್ ಬಿಸಿನೆಸ್ ಸಿಸ್ಟಮ್ ಮೆಸೇಜ್ ನ ಎರಡು ಫೋನುಗಳು ನಡುವೆ ಆಗಿರುತ್ತವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು.

**<u>ಪ್ರಶ್ನೆ ಸಂಖ್ಯೆ - 9.</u>** ಪ್ರಾ.ಸಾ.8/ಚಾ.ಸಾ.12 ಮಂಜುನಾಥ್ ಪಿ.ಎಸ್ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿ. 30.06.2023 ರಂದು ಚಾಸಾ 22 ರವರು ಠಾಣೆಗೆ ಹಾಜರಾಗಿ ಮೊಬೈಲ್ ಡಿಜಣಡುಜತಜ ಮಾಡುವ ಸಂಬಂಧ ಪಂಚರ ಸಮಕ್ಷಮ ನೀಡಿರುತ್ತಾರೆ ಅದರಲ್ಲಿ ಒಂದು ಕಪ್ಪು ಬಣ್ಣದ ಡಿಜಜಟು ಟಂಭುಟಜ ಅನ್ನು ಠಾಣೆಯ ಚಿಣಟಣ ಚಿಟಿಚಿಟಚಿಥಿಜಡಿ ಣಜಿಜಜ ಜಿಂಣಡಿ ಖಿಫಿ ಗೆ ಆಳವಡಿಸಿ ನೋಡಲಾಗಿ ಅದರಲ್ಲಿ 21 ಭಾವಚಿತ್ರಗಳನ್ನು ತೋರಿಸಿದ್ದು ಅದರ ಮೇಲೆ ‚ರಜಿಣತಿಚಿಡಿಜ ಒಂದು ವರದಿ ನೀಡಿದ್ದು ಅದನ್ನು ತನಿಖಾಧಿಕಾರಿಗೆ ನೀಡಿರುತ್ತಾರೆ ಮತ್ತು ಪ್ರಾಥಮಿಕ ವಿಶ್ಲೇಷಣಾ ಡತ್ತಾಂಶ ಮಾಡುವ ಸಮಯದಲ್ಲಿ ಜರುಗಿಸಿದ ಮಹಜರ್ ನಲ್ಲಿರುವ ತಮ್ಮ ಸಹಿಯನ್ನು ನಿ.ಪಿ.35(ಎ) ಎಂದು ಗುರ್ತಿಸಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು.

**ಪ್ರಶ್ನೆ ಸಂಖ್ಯೆ -** 10. ಪ್ರಾ.ಸಾ.9/ಚಾ.ಸಾ.12 ಮಂಜುನಾಥ್ ಬಿ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿ.03.11.2023 ರಂದು ಅವರಿಗೆ ಮತ್ತು ಚಾ.ಸಾ.16 ರವರಿಗೆ ಆರೋಪಿಯಾದ ನಿಮ್ಮನ್ನು ಪತ್ತೆ ಮಾಡಿ ಬರುವಂತೆ ತಿಳಿಸಿದ ಮೇರೆಗೆ ನಿಮ್ಮ ಇರುವಿಕೆ ಬಗ್ಗೆ ಕಲೆ ಹಾಕಿ ನಿಮ್ಮನ್ನು ನಾಪೊಕ್ಲು ವಿನ ಬೇತ್ ಗ್ರಾಮದಲ್ಲಿ ರಾತ್ರಿ 12.00 ಕ್ಕೆ ವಶಕ್ಕೆ ಪಡೆದು ದಿಃ04.11.2023 ರಂದು ಮಧ್ಯರಾತ್ರಿ 1.30 ಕ್ಕೆ ಠಾಣೆಗೆ ಕರೆತಂದು ತನಿಖಾಧಿಕಾರಿಯವರ ಮುಂದೆ ಹಾಜರು ಪಡಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು.

**ಪ್ರಶ್ನೆ ಸಂಖ್ಯೆ - 11.** ಪ್ರಾ.ಸಾ.10/ಚಾ.ಸಾ.17 ರಮ್ಯ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿಃ24.06.2023 ರಂದು ಚಾ.ಸಾ.1ರವರು ವಾಸವಿರುವ ಬಾಡಿಗೆ ಮನೆಯಲ್ಲಿ ಚಾ.ಸಾ.22 ರವರು ಹೇಳಿದಂತೆ ಕೃತ್ಯ ಸ್ಥಳದ ಮಹಜರ್ ಅನ್ನು ಅವರ ಕೈ ಬರಹದಲ್ಲಿ ಬರೆದಿರುತ್ತಾರೆ ಮತ್ತು ಅದೇ ದಿನ ಕೃತ್ಯ ಸ್ಥಳ ಮತ್ತು ಸ್ವತ್ತು ಅಮಾನತ್ತು ಮಹಜರ್ ಬೇಳೆ ಫೋಟೋ ತೆಗೆದು ತನಿಖಾಧಿಕಾರಿಯವರಿಗೆ ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು.

**ಪ್ರಶ್ನೆ ಸಂಖ್ಯೆ - 12.** ಪ್ರಾ.ಸಾ.11/ಚಾ.ಸಾ.22 ಪ್ರಮೀಳಾ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿ. 21.06.2023ರಂದು ಅವರು ಠಾಣಾ ಖಊಔ ಕರ್ತವ್ಯದಲ್ಲಿದ್ದಾಗ ಸಮಯ 19.30 ಗಂಟೆಗೆ ಚಾಸಾ 1 ರವರು ಠಾಣೆಗೆ ಹಾಜರಾಗಿ ಆರೋಪಿಯಾದ ನೀವು ದಿ. 07.05.2023 ರಂದು ಬೆ. 09.00 ಗಂಟೆಯಿದ ದಿ. 21.06.2023 ರ 13.18 ಗಂಟೆ ವರೆಗೆ ನಿಮ್ಮ ಮೊಬೈಲ್ ನಿಂದ ಚಾ.ಸಾ.1 ರವರ ನಂಬರ್ ಗೆ whasapp and facebook ಮುಖಾಂತರ message ಮಾಡಿ ಹಣ ಕೊಡುವಂತೆ ಹಾಗೂ ತನ್ನ ಕುಟುಂಬದವರಿಗೆ ಬೆದರಿಕೆ ಹಾಕಿ ಮಾನಹಾನಿ ಮತ್ತು ಪ್ರಾಣಹಾನಿ ಮಾಡುತ್ತಿರುವುದಾಗಿ ದೂರು ಕೊಟ್ಟು ನಿಮ್ಮ ಮೇಲೆ ಕಾನೂನು ರೀತಿ ಕ್ರಮ ಕೈ ಗೊಳ್ಳಬೇಕಾಗಿ ಕೋರಿದ ಮೇರೆಗೆ FIR ದಾಖಲಿಸಿ ಮೇಲಾದಿಕಾರಿಗಳಿಗೆ ನೀಡಿರುತ್ತಾರೆ. ನಂತರ ದಿ. 22.06.2023 ರಂದು ಚಾಸಾ 1 ರವರು 164 statement ನೀಡಲು ನ್ಯಾಯಾಲಯಕ್ಕೆ ಮನವಿ ಸಲ್ಲಿಸಿರುತ್ತಾರೆ, ಆರೋಪಿಯಾದ ನಿಮ್ಮ ತಂದೆಗೆ ವಿಚಾರಣೆ ಮಾಡಲು ನೋಟೀಸ್ ನೀಡಿರುತ್ತಾರೆ. ದಿ. 23.06.2023 ರಂದು ಆರೋಪಿಯ ತಂದೆಯಿಂದ ಹೇಳಿಕೆ ಪಡೆದುಕೊಂಡಿರುತ್ತಾರೆ. ದಿ. 24.06.2023 ರಂದು ಚಾಸಾ 1 ರವರು ಠಾಣೆಗೆ ಹಾಜರಾಗಿ ಮರು ಹೇಳಿಕೆ ನೀಡಿರುತ್ತಾರೆ, ಹಾಗೂ ಚಾಸಾ 1 ರವರು ಠಾಣೆಗೆ ಹಾಜರುಪಡಿಸಿದ್ದ ತನ್ನ redmi mobile ಹಾಗೂ ಆರೋಪಿ ಕಳುಹಿಸಿದ್ದ Whatsapp screenshot ಪ್ರತಿಗಳನ್ನು ಮಹಜರ್ ಮೂಲಕ ಅಮಾನತುಪಡಿಸಿಕೊಂಡು ಮಾಲು ಪಟ್ಟಿಯಲ್ಲಿ ಆಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತಾರೆ ಹಾಗೂ ಚಾಸಾ 1 ರವರ 164 statement ಅನ್ನು

ನ್ಯಾಯಾಲಯದಿಂದ ಪಡೆದು ಕಡತಕ್ಕೆ ಆಳವಡಿಸಿಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು.

**ಪ್ರಶ್ನೆ ಸಂಖ್ಯೆ - 13.** ಪ್ರಾ.ಸಾ.11/ಚಾ.ಸಾ.22 ರವರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿ. 30.06.2023 ರಂದು ಚಾಸಾ 1 ರವರಿಂದ ವಶಪಡಿಸಿಕೊಂಡಿದ್ದ ಮೊಬೈಲ್ ಅನ್ನು CEN Police station ಕಳುಹಿಸಿ retrieve ಮಾಡಿಸಿರುತ್ತಾರೆ. ದಿ. 05.07.2023 ರಂದು ಚಾಸಾ 1 ರವರು ಆರೋಪಿ ಕಳುಹಿಸಿದ Facebook screenshot ಪ್ರತಿಗಳನ್ನು ಠಾಣೆಗೆ ಹಾಜರುಪಡಿಸಿದ್ದು ಕಡತಕ್ಕೆ ಆಳವಡಿಸಿಕೊಂಡಿರುತ್ತಾರೆ. ದಿ. 24.07.2023 ರಂದು ಚಾಸಾ 1 ರವರ redmi mobile ಅನ್ನು ಬೆಂಗಳೂರಿನ ಈಖಐ ಗೆ ಕಳುಹಿಸಿರುತ್ತಾರೆ. ದಿ. 04.11.2023 ರಂದು ಬೆ. 01.30 ಕ್ಕೆ ಚಾಸಾ 15 ಮತ್ತು 16 ರವರು ನಾಪೋಕ್ಲು ವಿನ ಬೇತು ಗ್ರಾಮದಿಂದ ಆರೋಪಿಯನ್ನು ಕರೆದುಕೊಂಡು ಬಂದು ಠಾಣೆಗೆ ಹಾಜರುಪಡಿಸಿದ್ದು ಆರೋಪಿಯಿಂದ OPPO company ಮೊಬೈಲ್ ಅನ್ನು ಮಹಜರ್ ಮೂಲಕ ಅಮಾನತುಪಡಿಸಿಕೊಂಡು ಮಾಲು ಪಟ್ಟಿಯಲ್ಲಿ ಆಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ ಆರೋಪಿಯಾದ ನಿಮ್ಮ ಮೇಲೆ ದಸ್ತಗಿರಿ ಕ್ರಮ ಜರುಗಿಸಿ ಮಾನ್ಯ ನ್ಯಾಯಾಲಯಕ್ಕೆ ಹಾಜುರುಪಡಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು.

ಪ್ರಶ್ನೆ ಸಂಖ್ಯೆ - 14. ಪ್ರಾ.ಸಾ.11/ಚಾ.ಸಾ.22 ರವರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿ. 06.12.2023 ರಂದು ಆರೋಪಿಯಾದ ತಮ್ಮಿಂದ ವಶಪಡಿಸಿಕೊಂಡಿದ್ದ OPPO Mobile ಅನ್ನು FSL Bangalore ಗೆ ಕಳುಹಿಸಿ, ದಿ. 25.05.2024 ರಂದು ಈಖಐ ರವರಿಂದ ವರದಿ ಪಡೆದು ಮಾನ್ಯ ನ್ಯಾಯಾಲಯಕ್ಕೆ ಆರೋಪಿಯಾದ ತಮ್ಮ ವಿರುದ್ಧ ಅಂತಿಮ ವರದಿಯನ್ನು ಸಲ್ಲಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು.

**ಪ್ರಶ್ನೆ ಸಂಖ್ಯೆ - 15.** ಪ್ರಾ.ಸಾ.12/ಚಾ.ಸಾ.18 ರೂಪಿತ್ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿಃ04.11.2023 ರಂದು ಆರೋಪಿಯ ಸ್ವತ್ತು ಅಮಾನತ್ತು ಮಾಡುವಾಗ ಫೋಟೋ ತೆಗೆದು Canon Printer ನಿಂದ ಪ್ರಿಂಟ್ ಹಾಕಿಸಿ ತನಿಖಾಧಿಕಾರಿಯವರಿಗೆ ಹಾಜರು ಪಡಿಸಿರುತ್ತಾರೆ. ನಂತರ 65 ಬಿ ಭಾ.ಸಾಕ್ಷ್ಯ ಅಧಿನಿಯಮದಡಿಯಲ್ಲಿ ಪ್ರಮಾಣ ಪತ್ರ ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು.

**ಪ್ರಶ್ನೆ ಸಂಖ್ಯೆ - 16.** ಪ್ರಾ.ಸಾ.13/ಚಾ.ಸಾ.13 ದೀಪಕ್ ರವರು ತಮ್ಮ ಸಾಕ್ಷದಲ್ಲಿ ನುಡಿಯುತ್ತಾ, ದಿ. 06.12.2023 ರಂದು ಈ ಪ್ರಕರಣದಲ್ಲಿ ಚಾಸಾ 22 ರವರು ಚಾಸಾ 9 ಮತ್ತು 10 ರವರ ಜೊತೆಗೆ ಠಾಣೆಗೆ ಬಂದು ಪ್ರಕರಣದಲ್ಲಿ ಆರೋಪಿಯಿಂದ ವಶಪಡೆಸಿಕೊಂಡಿದ್ದ OPPO ಮೊಬೈಲ್ ಫೋನ್ ಅನ್ನು ಅವರಿಗೆ ಕೊಟ್ಟಿರುತ್ತಾರೆ. ನಂತರ ಫೋನ್ ಅನ್ನು ಚಾಸಾ 22 ರವರಿಗೆ ಹಸ್ತಾಂತರಿಸುವಾಗ ಮಹಜರ್ ಮಾಡಿಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು.

**ಪ್ರಶ್ನೆ ಸಂಖ್ಯೆ - 17.** ಪ್ರಾ.ಸಾ.14/ಚಾ.ಸಾ.14 ಶಿವರಾಜು ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿಃ04.11.2023 ರಂದು ಪೋಲೀಸರ ಕೋರಿಕೆಯಂತೆ ಅಶ್ಲೀಲ ವಿಡಯೋ face book ನಲ್ಲಿ ಹಾಕಿರುವ ವಿಚಾರವಾಗಿ ಮಾಡಿದ ನಿ.ಪಿ.30 ಮಹಜರ್ ಗೆ ಸಹಿ ಹಾಕಿರುವುದಾಗಿ ಮತ್ತು ಸದರಿ ಸಹಿಯನ್ನು ನಿ.ಪಿ.30(ಸಿ) ಎಂದು ಗುರ್ತಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು.

**ಪ್ರಶ್ನೆ ಸಂಖ್ಯೆ -18 :** ಈ ಪ್ರಕರಣದಲ್ಲಿ ನಿಮ್ಮ ಪರವಾಗಿ ಸಾಕ್ಷ್ಯ ವಿಚಾರಣೆ ಅಥವಾ ದಾಖಲಾತಿ ಹಾಜರುಪಡಿಸಲು ಬಯಸುವಿರಾ?

ಉತ್ತರಃ ಇಲ್ಲ.

**ಪ್ರಶ್ನೆ ಸಂಖ್ಯೆ -19 :** ಈ ಪ್ರಕರಣದಲ್ಲಿ ನೀವೇನಾದರೂ ಹೇಳಬಯಸುವಿರಾ?

ಉತ್ತರಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಓದಿ ವಿವರಿಸಿದ ನಂತರ ಆರೋಪಿಯು ನೀಡಿದ ಉತ್ತರಗಳನ್ನು ದಿಃ22-04-2026 ರಂದು ನನ್ನಿಂದ ದಾಖಲು ಮಾಡಿಕೊಳ್ಳಲಾಯಿತು).

ಸ್ಥಳಃ ಪೊನ್ನಂಪೇಟೆ
ದಿಃ22.04.2026.

Sd/-
ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್
ಪೊನ್ನಂಪೇಟೆ.